# ವಾಸನೆಯ ಬೆನ್ನತ್ತಿ

‘ದೂರವಿರು ದೂರ್ವಾಸನೆ, ಬರುತಲಿದೆ ದುರ್ವಾಸನೆ’ ಎನ್ನುವುದು ವೈ.ಎನ್. ಕೃಷ್ಣಮೂರ್ತಿ ಅವರ ಎರಡು ಸಾಲಿನ ಪದ್ಯ. ಪದ ಚಮತ್ಕಾರದ ಕಾರಣಕ್ಕೆ ಈ ಚುಟುಕವನ್ನು ಓದಿ ತುಟಿಗಳಲ್ಲಿ ಕಿರುನಗು ಮೂಡಬಹುದು. ಆದರೆ, ನಿಜಜೀವನದಲ್ಲಿ ಎದುರಾಗುವ ಯಾವುದೇ ವ್ಯಕ್ತಿಯ ಬಗ್ಗೆ ಹೀಗೆ ಹೇಳಬಹುದೆ? ಹಾಗೆ ಹೇಳಿದವರನ್ನು ಕವಿಯೆನ್ನಬಹುದೆ? ಕವಿ ಎನ್ನುವುದಿರಲಿ, ಮನುಷ್ಯ ಎನ್ನಬಹುದೆ?

ಪ್ರತಿಯೊಬ್ಬ ಮನುಷ್ಯನೂ ಹುಟ್ಟಿನಿಂದಲೇ ವಾಸನೆಯನ್ನು ಮೈಗಂಟಿಸಿಕೊಂಡಿದ್ದರೂ, ಕೆಲವು ವಾಸನೆಗಳಷ್ಟೇ ನಮಗೆ ಸಹ್ಯ. ಇತರರ ವಾಸನೆಯಿರಲಿ, ನಮ್ಮ ಮೈಯ ವಾಸನೆಯೇ ಕೆಲವೊಮ್ಮೆ ರೇಜಿಗೆ ಹುಟ್ಟಿಸುವುದುಂಟು. ಹಾಗಾಗಿಯೇ, ನಾಗರಿಕತೆಯ ಪೋಷಾಕಿನಲ್ಲಿ ಮೈಯ ಸಹಜ ಗಂಧವನ್ನು ಅಡಗಿಸಿಡುವ, ಬೆವರಿನ ವಾಸನೆಯ ಸ್ವರೂಪವನ್ನೇ ಬದಲಿಸುವ ಪ್ರಯತ್ನಗಳಲ್ಲಿ ಮನುಷ್ಯ ಆಸಕ್ತ. ಆ ಆಸೆಗೆ ತಕ್ಕಹಾಗೆ ಪ್ರಸಾಧನ ಸಾಮಗ್ರಿಗಳ ಪೇಟೆ ಕ್ರಿಯಾಶೀಲವಾಗಿರುತ್ತದೆ. ಈ ಪೇಟೆ ಯೋಜನಗಂಧಿಯನ್ನು ಮಾದರಿಯಾಗಿಟ್ಟುಕೊಂಡು ಅಡಿಗಂಧಿಯರನ್ನೂ ಅಂಗುಲಗಂಧಿಯರನ್ನೂ ಸೃಷ್ಟಿಸಿ, ದೇಹದ ಸಹಜ ವಾಸನೆಯೇ ಅಸಹಜವಾದುದು ಎನ್ನುವ ಅಭಿಪ್ರಾಯ ಸೃಷ್ಟಿಸಲು ಹೆಣಗುತ್ತದೆ. ಅದರ ಫಲವೆನ್ನುವಂತೆ, ಬಸ್ಸಿನಲ್ಲೋ ರೈಲಿನಲ್ಲೋ ಸಂತೆಯಲ್ಲೋ ಮತ್ತೆಲ್ಲೋ, ಪಕ್ಕದಲ್ಲಿ ಕೂರುವ ರೈತ–ಕಾರ್ಮಿಕರು ನಮಗೆ ಕಿರಿಕಿರಿ ಹುಟ್ಟಿಸಬಹುದು. ಸ್ನಾನ ಮಾಡದ ಹೆಣ್ಣುಮಗಳು ಕೊಳಕಳಂತೆ ಕಾಣಿಸಬಹುದು.

ವಾಸನೆ ಸಹ್ಯವೋ ಅಸಹ್ಯವೋ ಎನ್ನುವುದು ಸಮಯ–ಸಂದರ್ಭ ಹಾಗೂ ಅಭಿರುಚಿಯನ್ನು ಅವಲಂಬಿಸಿರುತ್ತದೆ. ಆದರೆ, ವಾಸನೆಯ ಕಾರಣಕ್ಕೆ ವ್ಯಕ್ತಿಯೊಬ್ಬರನ್ನು ಕೀಳಾಗಿ ಕಾಣುವುದನ್ನು ಒಪ್ಪಲಾಗದು. ಮೀನಿನ ವಾಸನೆ ನಮ್ಮ ಮೂಗಿಗೆ ಒಗ್ಗದಿರಬಹುದು. ಮೀನುಪೇಟೆಯಲ್ಲಿ ಕೆಲಸ ಮಾಡುವವರೂ ರೇಜಿಗೆಯಾಗಿ ಕಾಣಿಸಿದರೆ ಅದು ಮಾನಸಿಕ ಸಮಸ್ಯೆಯೇ ಸರಿ. ಯಾವಾಗ ಮುಖ ತಿರುವಬೇಕು, ಯಾವಾಗ ಮೂಗು ಮುಚ್ಚಿಕೊಳ್ಳುವ ಮೊದಲು ಯೋಚಿಸಬೇಕು ಎನ್ನುವುದು ವಿವೇಚನೆಗೆ ಸಂಬಂಧಿಸಿದ ಸಂಗತಿಯಷ್ಟೇ ಅಲ್ಲ, ಅದು ಮಾನವೀಯತೆಗೆ ಸಂಬಂಧಿಸಿದ ಸೂಕ್ಷ್ಮವೂ ಹೌದು.

ಕಸದ ಗುಪ್ಪೆ ಅಥವಾ ಲಾರಿಯ ಎದುರು ಹೋಗುವಾಗ ಸಾಮಾನ್ಯವಾಗಿ ಮೂಗು ಮುಚ್ಚಿಕೊಳ್ಳುತ್ತೇವೆ. ಹಾಗೆ ಮೂಗು ಮುಚ್ಚಿಕೊಳ್ಳುವುದು ಅಸಹಜವೇನಲ್ಲ. ಒಣ ಮತ್ತು ಹಸಿ ಕಸ ಸೇರಿ ರೂಪುಗೊಂಡ ದುರ್ನಾತ ಮೂಗು ಮುಚ್ಚಿಕೊಳ್ಳುವಂತೆ ಮಾಡುತ್ತದೆ. ಇಂಥ ಸಂದರ್ಭದ ಕುರಿತು ಕವಯಿತ್ರಿ ದು. ಸರಸ್ವತಿ ಅವರು ಸಭೆಯೊಂದರಲ್ಲಿ ಹೇಳಿದ ಮಾತು ಹೀಗಿದೆ: ‘ಕಸದ ಲಾರಿಯನ್ನು ಬಳಸಿಹೋಗುವಾಗ ನನಗೆ ಮೂಗು ಮುಚ್ಚಿಕೊಳ್ಳಬೇಕೆನ್ನಿಸುತ್ತದೆ. ಆದರೆ, ಹಾಗೆ ಮೂಗು ಮುಚ್ಚಿಕೊಳ್ಳುವುದು ಪೌರ ಕಾರ್ಮಿಕರಿಗೆ ಮಾಡುವ ಅವಮಾನ ಎನ್ನಿಸಿ, ಮೂಗು ಮುಚ್ಚಿಕೊಳ್ಳುವುದಿಲ್ಲ’. ಈ ಮಾತು, ಮಾನವೀಯತೆಯ ಕುರಿತ ವ್ಯಾಖ್ಯಾನವೂ ಹೌದು. ಕಸದೊಂದಿಗೆ ಒಡನಾಡುವ ಪೌರ ಕಾರ್ಮಿಕರ ಸಂಕಷ್ಟಗಳನ್ನು ಅರ್ಥ ಮಾಡಿಕೊಳ್ಳುವುದು ನಮಗೆ ಸಾಧ್ಯವಾಗುವುದಾದರೆ, ಕಸದ ಲಾರಿ ಎದುರಾದಾಗ ಮೂಗು ಮುಚ್ಚಿಕೊಳ್ಳಲು ಹಿಂದೆಮುಂದೆ ನೋಡುವಂತಾಗುತ್ತದೆ.

ಸಾರ್ವಜನಿಕ ಕಸ–ಕೊಳಕನ್ನು ಸ್ವಚ್ಛಗೊಳಿಸುವುದು ಹೇಗೆನ್ನುವುದರ ಬಗ್ಗೆ ಬಹು ದೊಡ್ಡ ಪಾಠ ಹೇಳಿಕೊಟ್ಟವರು ಮಹಾತ್ಮ ಗಾಂಧೀಜಿ. ಸಮಾಜದ ಮುಖ್ಯ ವಾಹಿನಿ ದೂರೀಕರಿಸಿದ ಜನರ ದುಸ್ಥಿತಿಯ ಜೊತೆಗೆ ಕೇರಿಗಳಲ್ಲಿನ ಕೊಳಕು ಕೂಡ ಬಾಪು ಅವರ ಕಳವಳಕ್ಕೆ ಕಾರಣವಾಗಿತ್ತು. ಬಾಪು ಅವರದು ತುಟಿ ಸಹಾನುಭೂತಿಯಾಗಿರಲಿಲ್ಲ. ಪೊರಕೆ ಹಿಡಿದು ಕೇರಿಗಳನ್ನು ಗುಡಿಸುವ ಮೂಲಕ, ಬಯಲಿನಲ್ಲಿನ ಮಲದ ಗುಡ್ಡೆಗಳಿಗೆ ಮಣ್ಣು ಹಾಕುವ ಮೂಲಕ ಅವರು ಸ್ವಚ್ಛತೆಯ ಪಾಠ ಹೇಳಿದರು. ಗಲೀಜು ಬಳಿಯುವಾಗ ಅವರು ಅಸಹ್ಯಿಸಿಕೊಳ್ಳಲಿಲ್ಲ. ಯಾರನ್ನೂ ಕೀಳಾಗಿ ಕಾಣಲಿಲ್ಲ. ಕಸ ಬಳಿಯುವುದು ವೈಯಕ್ತಿಕ ಹಾಗೂ ಸಾಮಾಜಿಕ ಪರಿವರ್ತನೆಯ ದಾರಿಯೆನ್ನುವುದು ಅವರ ನಂಬುಗೆಯಾಗಿತ್ತು. ಗಾಂಧಿ ಅವರ ಅಧ್ಯಾತ್ಮ ಸಾಧನೆಯಲ್ಲಿ ಜಾಡಮಾಲಿತನಕ್ಕೆ ಎತ್ತರದ ಸ್ಥಾನವಿದೆ. ಕುವೆಂಪು ಅವರ ಕಣ್ಣಿಗೆ ಜಗದ ಜಲಗಾರನಾಗಿ ಶಿವ ಕಂಡಂತೆ, ಗಾಂಧಿಯ ಕಣ್ಣಿಗೆ ‘ಕೊಳೆ’ ತೊಳೆಯುವುದು ಪೂಜೆಯ ರೂಪವಾಗಿತ್ತು.

ವಿಕಾರಗಳನ್ನು ತಿಳಿಗೊಳಿಸಿ ಮನಸ್ಸನ್ನು ಹದಗೊಳಿಸುವುದು ಅಧ್ಯಾತ್ಮದ ಒಂದು ರೂಪವಷ್ಟೇ. ಈ ಹದಗೊಳಿಸುವ ಕೆಲಸವನ್ನೇ ಸಾಹಿತ್ಯ ಸೇರಿದಂತೆ ಎಲ್ಲ ಕಲೆಗಳೂ ಮಾಡುತ್ತವೆ. ಅಧ್ಯಾತ್ಮದ ಸಾಧಕ, ಕವಿ, ಕಲೆಗಾರ ನಿರ್ವಹಿಸುವುದು ಕಸ–ಕೊಳಕು ಬಳಿಯುವ ಜಲಗಾರನ ಕೆಲಸವನ್ನೇ. ಕಸ ಬಳಿಯುವ ಸ್ವರೂಪ ಬೇರೆ ಬೇರೆಯಾಗಿದ್ದರೂ, ಅಂತಿಮ ಗುರಿ ಸಮಾಜವನ್ನು ಹಸನುಗೊಳಿಸುವುದೇ ಆಗಿದೆ. ಬುದ್ಧ, ಬಾಪು ಕುಷ್ಠ ರೋಗಿಗಳ ಶುಶ್ರೂಷೆ ಮಾಡಿದರು. ಅದೇ ಹಾದಿಯನ್ನು ತೆರೇಸಾ ತಾಯಿ ತಮ್ಮ ಬದುಕಾಗಿಸಿಕೊಂಡರು.

ಅಧ್ಯಾತ್ಮ ಸಾಧಕನೊಬ್ಬನಿಗೆ, ಕಲಾವಿದನಿಗೆ ಅಥವಾ ಕವಿಗೆ, ವ್ಯಕ್ತಿ ಅಥವಾ ಸಮಾಜ ಕೊಳಕಾಗಿ, ವಿರೂಪವಾಗಿ ಕಾಣಿಸಿದರೆ ಅದು ಅಸಹಜವಲ್ಲ. ಹಾಗೆ ಕಾಣದೆ ಹೋಗುವುದೇ ಅಸಹಜತೆ. ಕವಿ–ಕಲಾವಿದನ ಕ್ರಿಯಾಶೀಲತೆಗೆ ಸಮಾಜದ ಕುಂದು ಕೊರತೆಗಳೇ ಇಂಧನ. ವಿಕಾರಗಳನ್ನು ಮೀರುತ್ತಾ ಹೋಗುವುದು ಅಧ್ಯಾತ್ಮ ಪಯಣದ ಭಾಗ. ಆದರೆ, ಈ ಕೊಳಕು–ವಿರೂಪದ ಬಗ್ಗೆ ಕವಿಗೆ, ಕಲಾವಿದನಿಗೆ, ಅಧ್ಯಾತ್ಮ ಸಾಧಕನಿಗೆ ಅಸಹ್ಯವೆನ್ನಿಸಿದರೆ ಅದು ಅಸಹಜ. ಸಹ ಪಯಣಿಗನ ಕೊಳಕುತನ ನಮಗೆ ರೇಜಿಗೆ ಉಂಟುಮಾಡಬಹುದು. ಅಂಥ ಸಂದರ್ಭದಲ್ಲಿ, ವ್ಯಕ್ತಿಯ ಕೊಳಕುತನಕ್ಕೆ ಕಾರಣವಾದ ಬಡತನ–ಅಸಹಾಯಕತೆ ಅಥವಾ ದುಡಿಮೆಯ ಒತ್ತಡಗಳ ಕುರಿತು ನಾವು ಯೋಚಿಸದೇ ಹೋದಲ್ಲಿ, ಆ ವ್ಯಕ್ತಿಯ ದುಸ್ಥಿತಿಯಲ್ಲಿ ನಮ್ಮ ಪಾಲೆಷ್ಟಿದೆ ಎನ್ನುವ ಆತ್ಮವಿಮರ್ಶೆ ಸಾಧ್ಯವಾಗದೆ ಹೋದಲ್ಲಿ, ಕಾವ್ಯ–ಕಲೆಯೊಂದಿಗಿನ ಸಂಗದಲ್ಲಿ ನಾವು ಏನನ್ನೂ ಕಲಿತಿಲ್ಲ ಎಂದೇ ಅರ್ಥ. ಮತ್ತೊಬ್ಬರ ದೇಹದ ಕೊಳಕುತನದ ಬಗ್ಗೆ ನಮ್ಮಲ್ಲಿ ಉಂಟಾಗುವ ಹೇಸಿಗೆ, ನಮ್ಮ ಮನಸ್ಸು ಕೊಳೆತುಹೋಗಿರುವುದರ ಫಲವಾಗಿರುತ್ತದೆ.

■ **ಚಂಪಕಮಾಲಾ**

## ಮಾತೇ ಮುತ್ತು

- ಪ್ರತಿಫಲದ ಅಪೇಕ್ಷೆಯಿಲ್ಲದೆ ಕೇವಲ ಆತ್ಮತೃಪ್ತಿಗಾಗಿ ಕೆಲಸ ಮಾಡಿದಾಗ ಮೋಸ ಹೋದಾಗಲೂ ದುಃಖವಾಗುವುದಿಲ್ಲ.
  —ಡಿ.ವಿ.ಜಿ.
- ಸ್ನೇಹಿತ ನಿಸರ್ಗ ಕೊಟ್ಟಿರುವ ಸೋದರ. ಸ್ನೇಹಿತರನ್ನು ಹೊಂದಿರುವವರೇ ನಿಜವಾಗಿ ಧನ್ಯರು.
  —ನಿರಂಜನ
- ಎಲ್ಲೋ ಹುಡುಕಿದೆ ಇಲ್ಲದ ದೇವರ ಕಲ್ಲುಮುಳ್ಳುಗಳ ಗುಡಿಯೊಳಗೆ, ಇಲ್ಲೇ ಇರುವ ಪ್ರೀತಿ ಸ್ನೇಹಗಳ ಗುರುತಿಸದಾದೆನು ನಮ್ಮೊಳಗೆ.
  —ಜಿ.ಎಸ್. ಶಿವರುದ್ರಪ್ಪ
- ಕಾಲವನ್ನು ನಾವು ಪಾಲಿಸಿದರೆ ಅದು ನಮಗೆ ವಿಧೇಯವಾಗಿರುತ್ತದೆ.
  —ಸರ್ ಎಂ.ವಿ
- ಇವತ್ತಿನ ಹಾರೈಕೆ, ನಾಳಿನ ಪೂರೈಕೆ, ಇಂದಿನ ಕನಸು, ನಾಳೆಯ ನನಸು.
  —ಕುವೆಂಪು
- ನನಗೆ ಗುಲಾಬಿ ಹೂವು ಎಷ್ಟು ಪ್ರಿಯವೋ, ಕಳ್ಳಿಯ ಪೊದೆ ಕೂಡ ಅಷ್ಟೇ ಪ್ರಿಯ.
  —ಕೆ.ಕೆ. ಹೆಬ್ಬಾರ
- ಬೆಳಕಿಲ್ಲದ ನಾಡಲ್ಲಿ ನಡೆಯಬಲ್ಲೆನು ತಾಯಿ, ಕನಸಿಲ್ಲದ ನಾಡಲ್ಲಿ ಹೇಗೆ ನಡೆಯಲಿ?
  —ಗಿರೀಶ ಕಾರ್ನಾಡ
- ಕುರಿಯಂತೆ ನಡೆಯುವವರು ಬಹಳಷ್ಟು ಜನರು, ಗುರಿಯಿಟ್ಟು ನಡೆಯುವವರು ತುಂಬಾ ಕಡಿಮೆ.
  —ದ.ರಾ. ಬೇಂದ್ರೆ